D: 24-08-26 SL.NO: 29.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ಇವರು ದಿನಾಂಕ:24.08.2026ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಕ್ರಮ ಸಂಖ್ಯೆ:ರ ಸೂಚನೆಗೆ ಮಾನ್ಯ ಸಾರಿಗೆ ಸಚಿವರ ಉತ್ತರ:**

**ಪ್ರಶ್ನೆ:**

ಕಲ್ಯಾಣ ಕರ್ನಾಟಕ (KKRTC) ಮತ್ತು ವಾಯುವ್ಯ ಕರ್ನಾಟಕ (NWKRTC) ಭಾಗದ ಗ್ರಾಮೀಣ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆ ತೀವ್ರ ಶೋಚನೀಯ ಹಂತದಲ್ಲಿರುವ ಬಗ್ಗೆ ದಿನಾಂಕ:22.08.2026ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಹಳೆ ಮೈಸೂರು ಹಾಗೂ ಬೆಂಗಳೂರು ಭಾಗಗಳಿಗೆ ನೂತನ, ಎಸಿ ಹಾಗೂ ಮಲ್ಟಿ ಆಕ್ಸಲ್ ಬಸ್‌ಗಳನ್ನು ಒದಗಿಸಲಾಗುತ್ತಿದ್ದರೆ, ಕಲ್ಯಾಣ ಹಾಗೂ ವಾಯುವ್ಯ ಕರ್ನಾಟಕದ ಭಾಗಗಳಿಗೆ ಕೇವಲ ಹಳೆಯ, ದುರಸ್ತಿಗೆ ಬಂದ ಹಾಗೂ ಕೆಟ್ಟು ನಿಲ್ಲುವ ಬಸ್‌ಗಳನ್ನೇ ಓಡಿಸಲಾಗುತ್ತಿದೆ. ಸೀಟುಗಳು, ಕಿಟಕಿಗಳು, ಬಾಗಿಲುಗಳು ಹಾಳಾಗಿದ್ದು, ಲೈಟ್‌ಗಳೂ ಸರಿಯಾಗಿ ಉರಿಯುತ್ತಿಲ್ಲ. ಇತ್ತೀಚೆಗೆ ಯಾದಗಿರಿ ಸಮೀಪದ ಯಡ್ರಾಮಿ ಮಾರ್ಗದಲ್ಲಿ ಬಸ್ ಆಕ್ಸಲ್ ಕಟ್ ಆಗಿ ಅಪಘಾತಕ್ಕೀಡಾಗಿರುವುದು ಹಾಗೂ ಚಿಂಚೋಳಿ ಮಾರ್ಗದಲ್ಲಿ ಮೊಬೈಲ್ ಬೆಳಕಿನಲ್ಲಿ ಪ್ರಯಾಣಿಕರು ಪ್ರಯಾಣಿಸಿರುವುದು ಬಸ್‌ಗಳ ದುಸ್ಥಿತಿಗೆ ಸಾಕ್ಷಿಯಾಗಿದೆ. ಹಳೆಯ ಬಸ್‌ಗಳನ್ನು ನೀಡುತ್ತಿದ್ದರೂ, ಮಾಸಿಕ ಪಾಸ್ ದರದಲ್ಲಿ ಕಲ್ಯಾಣ ಕರ್ನಾಟಕದ ಪ್ರಯಾಣಿಕರಿಗೆ ಹೆಚ್ಚುವರಿ ಹೊರೆ ಹಾಕಲಾಗುತ್ತಿದೆ. ಉದಾಹರಣೆಗೆ 20ನೇ ಸ್ಟೇಜ್‌ಗೆ ಸಾಮಾನ್ಯ ಬಸ್ ಪಾಸ್ ದರ ₹3,220 ರಷ್ಟಿದ್ದರೆ, ಅದೇ ಸ್ಟೇಜ್‌ಗೆ ಪ್ರಯಾಣಿಕರಿಂದ ₹230 ವರೆಗೆ ಹೆಚ್ಚುವರಿ ಶುಲ್ಕ ವಸೂಲಿ ಮಾಡಲಾಗುತ್ತಿದೆ.

ಕಲ್ಯಾಣ ಕರ್ನಾಟಕ ಹಾಗೂ ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಗಳಿಗೆ ಹೊಸ ಬಸ್‌ಗಳನ್ನು ತಕ್ಷಣವೇ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಬೇಕು, ಹಳೆಯ ಬಸ್‌ಗಳನ್ನು ನೀಡಿ, ಹೆಚ್ಚಿನ ಪಾಸ್ ದರ ವಸೂಲಿ ಮಾಡುತ್ತಿರುವ ತಾರತಮ್ಯವನ್ನು ತಕ್ಷಣವೇ ತೆರವುಗೊಳಿಸಿ ಪ್ರಯಾಣಿಕರಿಗೆ ದರ ವಿನಾಯಿತಿ ನೀಡಿ ಗ್ರಾಮೀಣ ಭಾಗದ ಶಾಲಾ-ಕಾಲೇಜು ವಿದ್ಯಾರ್ಥಿಗಳು, ನೌಕರರು ಹಾಗೂ ಸಾರ್ವಜನಿಕರ ಸುರಕ್ಷಿತ ಪ್ರಯಾಣಕ್ಕೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಸಾರಿಗೆ ಸಚಿವರನ್ನು ಒತ್ತಾಯಿಸುತ್ತೇನೆ.

**ಉತ್ತರ:**

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಕೇಂದ್ರ ಸರ್ಕಾರದ ಅಧಿಸೂಚನೆಯಂತೆ 15 ವರ್ಷ ಪೂರ್ಣಗೊಂಡ ಹಳೆಯ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲಾಗುತ್ತಿದೆ. ಅಲ್ಲದೇ, ಕಾರ್ಯಾಚರಣೆಯಲ್ಲಿರುವ ಎಲ್ಲಾ ಬಸ್ಸುಗಳನ್ನು ಮೂಲ ಉತ್ಪಾದಕರ ಶಿಫಾರಸಿನಂತೆ ಕಾಲಕಾಲಿಕ ನಿರ್ವಹಣೆಗಳನ್ನು ಕೈಗೊಂಡು ಮತ್ತು ಅಲ್ಲದೇ ಹಳೆಯ ಬಸ್ಸುಗಳನ್ನು ಪ್ರತಿ ವರ್ಷ ಪ್ರಾದೇಶಿಕ ಸಾರಿಗೆ ಕಛೇರಿ, ಸಾರಿಗೆ ಇಲಾಖೆಯವರಿಂದ ಅರ್ಹತಾ ನವೀಕರಣ ಪತ್ರ ಪಡೆದು ಸಾರ್ವಜನಿಕರಿಗೆ ತೊಂದರೆಯಾಗದಂತೆ ಸುರಕ್ಷಿತ ಹಾಗೂ ಸುಸ್ಥಿತಿಯಲ್ಲಿರುವ ಬಸ್ಸುಗಳನ್ನು ಮಾತ್ರ ಕಾರ್ಯಾಚರಣೆ ಮಾಡಲಾಗುತ್ತಿದೆ. ರಿಪೇರಿಗೆ ಬಂದ ವಾಹನಗಳನ್ನು ಪ್ರತಿ ದಿನ ನಿರ್ವಹಣೆ ಮಾಡಿ ಮಾರ್ಗದ ಮೇಲೆ ಕಳುಹಿಸಲಾಗುತ್ತಿದೆ. ಎಲ್ಲಾ ಬಸ್ಸುಗಳ ಅವಶ್ಯಕ ನಿರ್ವಹಣೆ ಕೈಗೊಂಡು ಸುಸ್ಥಿತಿಯ ವಾಹನಗಳನ್ನು ಮಾತ್ರ ಕಾರ್ಯಾಚರಣೆಗೆ ಒದಗಿಸಲಾಗುತ್ತಿದ್ದು ಪ್ರಯಾಣಿಕರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲಾಗುತ್ತಿದೆ.

**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:-**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಪ್ರಸ್ತುತ 4812 ಬಸ್ಸುಗಳು ಕಾರ್ಯಾಚರಣೆಯಲ್ಲಿರುತ್ತವೆ. ಈ ಪೈಕಿ ಪ್ರಸ್ತುತ ಸಾಲಿನಲ್ಲಿ ಒಟ್ಟು 450 ಹಳೆಯ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಯೋಜಿಸಲಾಗಿದ್ದು, ಇಲ್ಲಿಯವರೆಗೆ 170 ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲಾಗಿದೆ.

ಯಾದಗಿರಿ ಸಮೀಪದ ಯಡ್ರಾಮಿ ಮಾರ್ಗದಲ್ಲಿ ಬಸ್ ಆಕ್ಸಲ್ ಕಟ್ಟಾಗಿ ಅಪಘಾತಕ್ಕೀಡಾಗಿರುವ ಕುರಿತು ದಿನಾಂಕ:22.08.2026ರ ಪತ್ರಿಕಾ ಪ್ರಕಟಣೆ ಕುರಿತಂತೆ ಪತ್ರಿಕೆಯಲ್ಲಿ ಪ್ರಕಟವಾಗಿರುವ ವಾಹನದ ಫೋಟೊ, ಹಿಂದಿನ ಅಪಘಾತಗಳ ಸಂಗ್ರಹದ ಫೋಟೊ ಆಗಿರುತ್ತದೆ.

ಆದರೆ KA32 F-1767 ವಾಹನವು ದಿನಾಂಕ:11.10.2025 ರಂದು ಯಡ್ರಾಮಿ ಸಮೀಪ ಕಲಕೇರಿ ಹತ್ತಿರ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿನ ತಗ್ಗಿನ ಪ್ರದೇಶಕ್ಕೆ ಹೋಗಿರುತ್ತದೆ. ದಿನಾಂಕ:26.04.2026 ರಂದು KA32 F-1984 ಕರಕಳ್ಳಿ ಹತ್ತಿರ ಮುಂದಿನ ಶ್ಯಾಕಲ್ ಪಿನ್ ಹೊರಗಡೆ ಬಂದು ರಸ್ತೆಯ ಬದಿಯಲ್ಲಿ ಬಸ್ ಇಳಿಗಿಳಿದಿರುತ್ತದೆ. ಸದರಿ ಘಟನೆಯಲ್ಲಿ ಯಾವುದೇ ಪ್ರಯಾಣಿಕರು ಗಾಯಗೊಂಡಿರುವುದಿಲ್ಲ ಹಾಗೂ ಪೋಲಿಸ್ ಸ್ಟೇಷನ್ ನಲ್ಲಿ ಪ್ರಕರಣ ದಾಖಲಾಗಿರುವುದಿಲ್ಲ.

ಅಲ್ಲದೆ, ದಿನಾಂಕ:04.07.2026 ರಂದು ಕಲಬುರಗಿಯಿಂದ ಚಿಂಚೋಳಿಗೆ ಕಾರ್ಯಾಚರಣೆಯಲ್ಲಿರುವ ಕೆಎ-28 ಎಫ್-1985 ಬಸ್ಸನ್ನು ಹೆಡ್ ಲೈಟ್ ಬರದ ಕಾರಣ ಮೊಬೈಲ್ ಟಾರ್ಚ್ ಬೆಳಕಲ್ಲಿ ಕಾರ್ಯಾಚರಣೆ ಮಾಡಿರುವ ಕುರಿತು ವಾಹನದ ಸೂಕ್ತ ಮುಂಜಾಗ್ರತಾ ನಿರ್ವಹಣೆ ಮಾಡಲು ವಿಫಲರಾದ ತಾಂತ್ರಿಕ ಮೇಲ್ವಿಚಾರಕ

ಹಾಗೂ ತಾಂತ್ರಿಕ ಸಿಬ್ಬಂದಿಯನು ಹಾಗೂ ವಾಹನದಲ್ಲಿ ದೋಷ ಬಂದಿದ್ದರೂ ಹತ್ತಿರದ ಘಟಕಕ್ಕೆ ತೆರಳಿ ದುರಸ್ಥಿ ಮಾಡಿಸಿಕೊಳ್ಳದೆ ಮೊಬೈಲ್ ಟಾರ್ಚ್‌ನಲ್ಲಿ ವಾಹನ ಚಾಲನೆ ಮಾಡಿರುವ ಚಾಲಕರನ್ನು ಅಮಾನತ್ತು ಮಾಡಲಾಗಿದೆ.

ಎಪ್ರಿಲ್-2023 ರಿಂದ ಜುಲೈ-2026 ರವರೆಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ ಒಟ್ಟು 1185 ಹೊಸ ಬಸ್ಸುಗಳನ್ನು ಖರೀದಿಸಿ ಈ ಕೆಳಕಂಡ ವಿಭಾಗಗಳಿಗೆ ಹಂಚಿಕೆ ಮಾಡಲಾಗಿದೆ.

| ಕ್ರ ಸಂ | ವಿಭಾಗ | ಬಸ್ಸುಗಳ ಸಂಖ್ಯೆ |
|---|---|---|
| 1 | ಕಲಬುರಗಿ ವಿಭಾಗ-1 | 136 |
| 2 | ಕಲಬುರಗಿ ವಿಭಾಗ-2 | 111 |
| 3 | ಯಾದಗಿರಿ | 105 |
| 4 | ರಾಯಚೂರು | 193 |
| 5 | ಬೀದರ | 131 |
| 6 | ಬಳ್ಳಾರಿ | 116 |
| 7 | ಕೊಪ್ಪಳ | 104 |
| 8 | ವಿಜಯನಗರ | 143 |
| 9 | ವಿಜಯಪುರ | 146 |
| | ಒಟ್ಟು | **1185** |

ಅಲ್ಲದೆ, 44 ವಿವಿಧ ಮಾದರಿಯ ( AC Sleeper-16, Non Ac Sleeper-16, & AC Seater 12) ಪ್ರತಿಷ್ಠಿತ ಸಾರಿಗೆ ಬಸ್ಸುಗಳು ಸೆಪ್ಟಂಬರ್-2026 ರ ಅಂತ್ಯಕ್ಕೆ ಸೇರ್ಪಡೆಗೊಳ್ಳಲಿವೆ.

2025-26ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾದ 400 ಬಸ್ಸುಗಳನು ಖರೀದಿಸಲು ಟೆಂಡರ್ ಕರೆಯಲಾಗಿರುತ್ತದೆ. ಸದರಿ ಬಸ್ಸುಗಳ ಖರೀದಿ ವೆಚ್ಚವನು ಸರ್ಕಾರದಿಂದ ಪೂರಕ ಆಯವ್ಯಯದಲ್ಲಿ ನೀಡಲಾಗುವ ರೂ.76.00 ಕೋಟಿಗಳ ಅನುದಾನ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಹಂಚಿಕೆಯಾಗಿರುವ ರೂ.45.00 ಕೋಟಿಗಳು ಹಾಗೂ ರೂ. 30.78 ಕೋಟಿಗಳ ಅನುದಾನವನ್ನು KKRDB ಯಿಂದ ಭರಿಸಿ ಖರೀದಿಸಲು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಕೇಂದ್ರ ಸರ್ಕಾರದ ಪಿಎಮ್ ಇ-ಬಸ್ ಸೇವಾ ಯೋಜನೆಯಡಿ ನಿಗಮದ 3 ನಗರಗಳಿಗೆ ಒಟ್ಟು 200 (ಕಲಬುರಗಿ 100, ಬಳ್ಳಾರಿ 50, ವಿಜಯಪುರ-50) ಎಲೆಕ್ಟ್ರಿಕಲ್ ಬಸ್‌ಗಳು ನಿಗಮಕ್ಕೆ ಹಂಚಿಯಾಗಿದ್ದು, ಪ್ರಕ್ರಿಯು ಪರಿಶೀಲನೆಯಲ್ಲಿರುತ್ತದೆ. ಅಲ್ಲದೆ, 2026-27ನೇ ಸಾಲಿನ ಆಯವ್ಯಯದನ್ವಯ ಕಕರಸಾ ನಿಗಮಕ್ಕೆ 200 ಬಸ್ಸುಗಳು ಹಂಚಿಕೆಯಾಗಿದ್ದು, ಸದರಿ ಬಸ್ಸುಗಳ ಖರೀದಿಗೆ ಅಂದಾಜು ರೂ.76.00 ಕೋಟಿಗಳ ಅನುದಾನ ಹಂಚಿಕೆ ಮಾಡಲು KKRDBಗೆ ಪತ್ರ ಬರೆಯಲಾಗಿದ್ದು, ಅನುದಾನ ಲಭ್ಯತೆಯೊಂದಿಗೆ ಬಸ್‌ಗಳ ಖರೀದಿ ನಂತರ ಅಗತ್ಯಕ್ಕನುಗುಣವಾಗಿ ನಿಗಮಕ್ಕೆ ಬಸ್‌ಗಳನ್ನು ಸೇರ್ಪಡೆಗೊಳಿಸಲಾಗುವುದು.

ನಿಗಮದಲ್ಲಿ ಪ್ರತಿ ದಿನ ಒಂದೇ ಮಾರ್ಗದಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ದೃಷ್ಠಿಯಿಂದ ಮಾಸಿಕ ಬಸ್ ಪಾಸ್ ಯೋಜನೆಯನು ಜಾರಿಗೊಳಿಸಲಾಗಿರುತ್ತದೆ. ನಿಗಮದಲ್ಲಿ 01 ರಿಂದ 10 ನೇ ಸ್ಟೇಜ್ ವರೆಗೆ ಸಾಮಾನ್ಯ ವರ್ಗದ ಸಾರಿಗೆಗಳಿಗೆ ಸಂಚರಿಸುವ ಪ್ರಯಾಣಿಕರಿಗೆ ಸಾಮಾನ್ಯ ವರ್ಗದ ಮಾಸಿಕ ಬಸ್ ಪಾಸುಗಳನು ಹಾಗೂ 01 ರಿಂದ 20 ನೇ ಸ್ಟೇಜ್ ವರೆಗೆ ವೇಗದೂತ ಸಾರಿಗೆಗಳಲ್ಲಿ ಸಹ ರಿಯಾಯಿತಿ ಮಾಸಿಕ ಬಸ್ ಪಾಸ್‌ಗಳನು ನೀಡಲಾಗುತ್ತಿದೆ. ಪ್ರಸ್ತುತ ಚಾಲ್ತಿಯಲ್ಲಿರುವ ಮಾಸಿಕ ಬಸ್ ಪಾಸ್‌ದರಗಳ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

**ಎಕ್ಸ್‌ಪ್ರೆಸ್ ಮತ್ತು ನಾನ್-ಸ್ಟಾಪ್ ಸಾರಿಗೆ ಹಾಗೂ ಸಾಮಾನ್ಯ ಸಾರಿಗೆಗಳ ಮಾಸಿಕ ಬಸ್ ಪಾಸ್ ದರಗಳು**

**(ರೂ.ಗಳಲ್ಲಿ)**

| ದೂರದ ಹಂತಗಳು | ಎಕ್ಸ್‌ಪ್ರೆಸ್ ಮತ್ತು ನಾನ್-ಸ್ಟಾಪ್ ಸಾರಿಗೆ | | ಸಾಮಾನ್ಯ ಸಾರಿಗೆ | |
|---|---|---|---|---|
| | ಸಾಮಾನ್ಯ ಪ್ರಯಾಣಿಕರು | ಹಿರಿಯ ನಾಗರಿಕರು | ಸಾಮಾನ್ಯ ಪ್ರಯಾಣಿಕರು | ಹಿರಿಯ ನಾಗರಿಕರು |
| 1 | 520 | 465 | 460 | 415 |
| 2 | 810 | 725 | 750 | 675 |
| 3 | 1270 | 1140 | 1040 | 935 |

| | | | | |
|---|---|---|---|---|
| 4 | 1500 | 1350 | 1270 | 1140 |
| 5 | 1620 | 1455 | 1380 | 1245 |
| 6 | 1850 | 1660 | 1500 | 1345 |
| 7 | 2075 | 1870 | 1610 | 1450 |
| 8 | 2310 | 2070 | 1790 | 1605 |
| 9 | 2475 | 2225 | 1960 | 1760 |
| 10 | 2720 | 2435 | 2070 | 1865 |
| 11 | 2825 | 2540 | | |
| 12 | 2940 | 2640 | | |
| 13 | 3000 | 2700 | | |
| 14 | 3050 | 2745 | | |
| 15 | 3110 | 2795 | | |
| 16 | 3170 | 2845 | | |
| 17 | 3280 | 2955 | | |
| 18 | 3340 | 3005 | | |
| 19 | 3410 | 3060 | | |
| 20 | 3450 | 3110 | | |

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ 20 ನೇ ಸ್ಟೇಜ್ ವರೆಗೆ ವೇಗದೂತ ಸಾರಿಗೆಗೆ ರೂ.152/- ಪ್ರಯಾಣ ದರ ಇದ್ದು, ಹೋಗಿ ಬರಲು ಪ್ರತಿ ದಿನ ರೂ.304/- ರಂತೆ ಒಂದು ತಿಂಗಳಿಗೆ ರೂ.9120/- ರಷ್ಟು ಪ್ರಯಾಣ ದರ ಉಂಟಾಗುತ್ತದೆ. ಆದರೆ 20 ನೇ ಸ್ಟೇಜ್ ವರೆಗೆ ವೇಗದೂತ ಸಾರಿಗೆಯಲ್ಲಿ ಸಂಚರಿಸುವ ಪ್ರಯಾಣಿಕರಿಗೆ ರೂ.3450/- ಮಾಸಿಕ ದರ ನಿಗದಿಪಡಿಸಲಾಗಿರುತ್ತದೆ. ಇದರಿಂದ ರೂ.5670/- ರಷ್ಟು ಅಂದರೆ 62.17% ರಷ್ಟು ರಿಯಾಯಿತಿ ಒದಗಿಸಲಾಗಿದೆ. ಸದರಿ ದರ ಕರಾರಸಾ ನಿಗಮಕ್ಕೆ ಹೋಲಿಸಿದಾಗ ರೂ.230/- ಹೆಚ್ಚಾಗಿರುತ್ತದೆ. ಸದರಿ ಮಾಸಿಕ ಬಸ್ ಪಾಸ್ ದರವನ್ನು ವೆಚ್ಚಕ್ಕನುಗುಣವಾಗಿ ನಿಗದಿಪಡಿಸಲಾಗಿರುತ್ತದೆ.

ಇತ್ತೀಚಿಗೆ ಇಂಧನ ದರ, ಬಿಡಿ ಭಾಗ, ಸಿಬ್ಬಂದಿಗಳ ವೇತನದಲ್ಲಿ ಹೆಚ್ಚಳವಾಗಿರುವುದರಿಂದ ಸದರಿ ದರಗಳನ್ನು ಮುಂದುವರೆಸುವುದು ನಿಗಮದ ಹಿತದೃಷ್ಟಿಯಿಂದ ಸೂಕ್ತವಾಗಿರುತ್ತದೆ

**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:-**

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 2023-24ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 789 ಹಳೆಯ ಬಸ್ಸುಗಳನ್ನು ನಿಷ್ಕ್ರೀಯಗೊಳಿಸಲಾಗಿರುತ್ತದೆ. ಅಲ್ಲದೇ ಹಳೆಯ ಬಸ್ಸುಗಳ ಬದಲಾವಣೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ವಾಕರಸಾ ಸಂಸ್ಥೆಯಲ್ಲಿ 2023-24ರಿಂದ ಇಲ್ಲಿಯವರೆಗೆ ಒಟ್ಟು 1384 ಹೊಸ ಬಸ್ಸುಗಳನ್ನು ಖರೀದಿಸಲಾಗಿರುತ್ತದೆ. ಅಲ್ಲದೇ 2026-27ನೇ ಸಾಲಿನಲ್ಲಿ ಹೊಸ ಬಸ್ಸುಗಳನ್ನು ಖರೀದಿಸುವ ಯೋಜನೆ ಇರುತ್ತದೆ. ಅದರಂತೆ ವರ್ಷವಾರು ನಿರುಪಯುಕ್ತಗೊಳಿಸಲಾದ ಹಾಗೂ ಖರೀದಿಸಲಾದ ಹೊಸ ವಾಹನಗಳ ವಿವರ ಈ ಕೆಳಗಿನಂತಿದೆ.

| ವರ್ಷ | ನಿರುಪಯುಕ್ತಗೊಳಿಸಿದ ಬಸ್ಸುಗಳ ಸಂಖ್ಯೆ | ಹೊಸ ಬಸ್ಸುಗಳ ಸಂಖ್ಯೆ |
|---|---|---|
| 2023-24 | 128 | 296 |
| 2024-25 | 224 | 560 |
| 2025-26 | 297 | 354 |
| 2026-27 (ಜುಲೈ-2026ರವರೆಗೆ) | 140 | 174 |
| ಒಟ್ಟು | **789** | **1384** |

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸಂಚರಿಸುತ್ತಿರುವ ಬಸ್‌ಗಳಲ್ಲಿ ಪ್ರಯಾಣಿಕರ ಸುರಕ್ಷತೆಗೆ ಕಾಲಕಾಲಕ್ಕೆ ಬದಲಾವಣೆಯಾಗಿರುವ ಸರ್ಕಾರದ ಮಾರ್ಗಸೂಚಿ ಹಾಗೂ CMVR ಗಳನ್ವಯ PIS, VLTD &

Panic Buttons, GPS, Camera, Hooters, Emegency Exits, FDAS/FDSS, Electronic vehicle stability control, ABS ಗಳಂತಹ ಸುರಕ್ಷತಾ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ ಹಾಗೂ ಅಳವಡಿಸಿಕೊಂಡಿರುವ ಸುರಕ್ಷತಾ ಕ್ರಮಗಳನ್ನು ಪ್ರಾದೇಶಿಕ ಸಾರಿಗೆ ಕಛೇರಿರವರಿಂದ ನೊಂದಣಿ/ರಹದಾರಿ ನವೀಕರಣ ಸಮಯದಲ್ಲಿ ಪರಿಶೀಲನೆಗೆ ಒಳಪಡಿಸಿ, ಸುಸ್ಥಿತಿಯಲ್ಲಿರುವ ವಾಹನಗಳನ್ನು ಮಾತ್ರ ಮಾರ್ಗದ ಮೇಲೆ ಕಾರ್ಯಾಚರಣೆ ಮಾಡಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ ಟಿಡಿ 47 ಟಿಸಿಬಿ 2024, ದಿನಾಂಕ:04-01-2025 ರನ್ವಯ ಚಾಲಿ ಪ್ರಯಾಣ ದರಗಳನ್ನು ಶೇ15ರಷ್ಟು ಹೆಚ್ಚಿಸಿ ಪರಿಷ್ಕರಿಸಲು ಅನುಮತಿಸಿ ಆದೇಶಿಸಿರುವುದರಿಂದ ವಾಕರಸಾಸಂಸ್ಥೆಯಲ್ಲಿ ದಿನಾಂಕ:04/05-01-2025 ರಿಂದ ಜಾರಿಗೆ ಬರುವಂತೆ ಚಾಲಿ ಮಾಸಿಕ ಬಸ್ ಪಾಸ್ ದರಗಳ ಮೇಲೆ ಶೇ15ರಷ್ಟು ಹೆಚ್ಚಿಸಿ ಪರಿಷ್ಕೃತ ದರಗಳನ್ನು ಅಳವಡಿಸಿಕೊಂಡು ಕಾರ್ಯಾಚರಣೆ ಮಾಡಲಾಗುತ್ತಿದೆ. ಹಂತವಾರು ಪಾಸ್‌ದರಗಳ ವಿವರ ಈ ಕೆಳಗಿನಂತಿದೆ.

ಮಾಸಿಕ ಬಸ್ ಪಾಸುಗಳ ದರ:

| ಹಂತ | ಚಾಲ್ತಿ ಪಾಸ್ ದರ | ಪರಿಷ್ಕೃತ ದರ | ಹಂತ | ಚಾಲ್ತಿ ಪಾಸ್ ದರ | ಪರಿಷ್ಕೃತ ದರ |
|---|---|---|---|---|---|
| 1 | 450 | 520 | 11 | 2450 | 2825 |
| 2 | 700 | 810 | 12 | 2550 | 2950 |
| 3 | 1100 | 1275 | 13 | 2600 | 3000 |
| 4 | 1300 | 1500 | 14 | 2650 | 3050 |
| 5 | 1400 | 1625 | 15 | 2700 | 3125 |
| 6 | 1600 | 1850 | 16 | 2750 | 3175 |
| 7 | 1800 | 2075 | 17 | 2850 | 3280 |
| 8 | 2000 | 2300 | 18 | 2900 | 3350 |
| 9 | 2150 | 2500 | 19 | 2950 | 3400 |
| 10 | 2350 | 2700 | 20 | 3000 | 3450 |

ಮುಂದುವರೆದು, ಇತ್ತೀಚೆಗೆ ಇಂಧನ ದರ, ಬಿಡಿ ಭಾಗ, ಸಿಬ್ಬಂದಿಗಳ ವೇತನದಲ್ಲಿ ಹೆಚ್ಚಳವಾಗಿರುವುದರಿಂದ ಸದರಿ ದರಗಳನ್ನು ಮುಂದುವರೆಸುವುದು ನಿಗಮದ ಹಿತದೃಷ್ಟಿಯಿಂದ ಸೂಕ್ತವಾಗಿರುತ್ತದೆ.

ಸಂಖ್ಯೆ: ಟಿಡಿ 249 ಟಿಸಿಕ್ಯೂ 2026

(ಬಿ.ಎಸ್. ಸುರೇಶ)
ಸಾರಿಗೆ ಸಚಿವರು